ಶ್ರೀ ಲಕ್ಷ್ಮಣ ಸ. ಸವದಿ (ಸಹಕಾರ ಸಚಿವರು) :

ಅ) ಕೇಂದ್ರ ಸರ್ಕಾರ ರೈತರ ಸಾಲ ಮನ್ನಾ ಯೋಜನೆಯಡಿ ಒಟ್ಟು 2,87,362 ರೈತರಿಗೆ ಸಂಬಂಧಿಸಿದಂತೆ ರೂ.454.08 ಕೋಟಿಗಳ ಬೇಡಿಕೆಯು ಸ್ವೀಕೃತವಾಗಿದ್ದು ಈ ಪೈಕಿ ರೂ.330.12 ಕೋಟಿಗಳನ್ನು ಕೇಂದ್ರ ಸರ್ಕಾರವು ಈವರೆಗೆ ಬಿಡುಗಡೆ ಮಾಡಿರುತ್ತದೆ.

ಆ) ಈ ಪೈಕಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಹಾಗೂ ಹಿಂದುಳಿದ ವರ್ಗದ ರೈತರುಗಳ ಸಂಖ್ಯೆ ಹಾಗೂ ಸಾಲ ಮನ್ನಾ ಆಗಿರುವ ಮೊತ್ತ ವಿವರ:-

(ರೂ. ಲಕ್ಷಗಳಲ್ಲಿ)

ಕ್ರ.ಸಂ.		ರೈತರ ಸಂಖ್ಯೆ	ಮನ್ನಾ ಮಾಡಿರುವ ಮೊತ್ತ
1.	ಪರಿಶಿಷ್ಟ ಜಾತಿ	15,914	2549.16
2.	ಪರಿಶಿಷ್ಟ ವರ್ಗ	9,966	1686.26
3.	ಹಿಂದುಳಿದ ವರ್ಗ	50,278	10,304.90
	ಒಟ್ಟು	**76,158**	**14540.32**

234 ಶ್ರೀ ಸುನೀಲ್ ವಿ.ಹೆಗಡೆ, ಹಳಿಯಾಳ : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಇಂಜಿನಿಯರ್ ಗಳ ಸಂಖ್ಯೆ ಎಷ್ಟು (ಹುದ್ದೆವಾರು ಮಾಹಿತಿ ನೀಡುವುದು):

ಆ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಇಂಜಿನಿಯರ್‌ಗಳ ಸಂಖ್ಯೆ : ಒಟ್ಟು **1822**

ಹುದ್ದೆವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಲೋಕೋಪಯೋಗಿ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳಲ್ಲಿ ನೇರ ನೇಮಕಾತಿ ಪಾಲಿನ 104 ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದಿಂದ

ಭರ್ತಿಮಾಡಲು ಕ್ರಮ ಕೈಗೊಳ್ಳಲಾಗಿದ್ದು, ಪ್ರಕ್ರಿಯೆ ಪ್ರಗತಿಯಲ್ಲಿದೆ. ಅಲ್ಲದೆ, 214 ಸಹಾಯಕ ಇಂಜಿನಿಯರ್ ಹಾಗೂ 183 ಕಿರಿಯ ಇಂಜಿನಿಯರ್ ಹುದ್ದೆಗಳನ್ನು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಲು ಈಗಾಗಲೇ ಕರ್ನಾಟಕ ಲೋಕಸೇವಾ ಆಯೋಗವನ್ನು ಕೋರಲಾಗಿದೆ. ಖಾಲಿ ಇರುವ ಉಳಿದ ಹುದ್ದೆಗಳನ್ನು ಪದೋನ್ನತಿ ಹಾಗೂ ವರ್ಗಾವಣೆ ಮೂಲಕ ಭರ್ತಿ ಮಾಡಲಾಗುವುದು.

ಇಂಜಿನಿಯರಿಂಗ್ ಸೇವೆಯನ್ನು ಹೊಂದಿರುವ ಇತರೆ ಇಲಾಖೆಗಳು ಆ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಬೇಕಾಗಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 234ಕ್ಕೆ ಅನುಬಂಧ

ಕ್ರ ಸಂ.	ಇಲಾಖೆ	ವೃಂದಗಳು					
		ಅಧೀಕ್ಷಕ ಇಂಜಿನಿಯರ್	ಕಾರ್ಯಪಾಲಕ ಇಂಜಿನಿಯರ್	ಸಹಾಯಕ ಕಾರ್ಯಪಾಲಕ ಇಂಜಿನಿಯರ್	ಸಹಾಯಕ ಇಂಜಿನಿಯರ್	ಕಿರಿಯ ಇಂಜಿನಿಯರ್	ಒಟ್ಟು
1	ಲೋಕೋಪಯೋಗಿ ಇಲಾಖೆ	15	06	240	214	183	658
2	ಜಲ ಸಂಪನ್ಮೂಲ ಇಲಾಖೆ	10	–	64	382	37	493
3	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ	01	10	22	287	227	547
4	ಸಣ್ಣ ನೀರಾವರಿ ಇಲಾಖೆ	–	–	26	–	–	26
5	ಸಹಕಾರ ಇಲಾಖೆ (ಕೃಷಿ ಮಾರಾಟ ಇಲಾಖೆ)	–	–	01	39	16	56

6	ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ರೇಷ್ಮೆ)	–	–	02	01	01	04
7	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಕೆಹೆಚ್ಎಸ್ ಡಿಆರ್ಪಿ)	–	01	03	34	–	38
	ಒಟ್ಟು	**26**	**17**	**358**	**957**	**464**	**1822**

287 ಶ್ರೀ ಹ್ಯಾರೀಸ್ ಎನ್.ಎ. : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಾವಯವ ಗೊಬ್ಬರ ಬಳಕೆಗೆ ನೀಡುತ್ತಿರುವ ಸರ್ಕಾರದ ಪ್ರೋತ್ಸಾಹವೇನು?

ಆ) ಈ ಯೋಜನೆಗೆ ಸಹಾಯಕವಾಗುವ ದಿಶೆಯಲ್ಲಿ ನೀಡಲಾಗುತ್ತಿರುವ ಅನುದಾನ/ ಸಹಾಯಧನ ಮೊತ್ತ ಎಷ್ಟು?

ಇ) ಕಳೆದ 2 ವರ್ಷಗಳಲ್ಲಿ ಬಿಡುಗಡೆಯಾದ ಅನುದಾನ/ಸಹಾಯ ಧನವೆಷ್ಟು? (ತಾಲ್ಲೂಕುವಾರು ವಿವರ ನೀಡುವುದು)

ಶ್ರೀ ಎಸ್.ಎ.ರವೀಂದ್ರನಾಥ್ (ಕೃಷಿ ಸಚಿವರು) :

ಅ) ರಾಜ್ಯ ಸರ್ಕಾರವು ಸಾವಯವ ಗೊಬ್ಬರಗಳ ಬಳಕೆಯನ್ನು ಪ್ರೋತ್ಸಾಹಿಸಲು ಕ್ಷೇತ್ರ/ರೈತರ ಮಟ್ಟದಲ್ಲಿ ಎರೆಹುಳು ಗೊಬ್ಬರ ಉತ್ಪಾದನೆ ಮಾಡಲು ಪ್ರೋತ್ಸಾಹಧನ ನೀಡಿ ಉತ್ತೇಜಿಸಲಾಗುತ್ತಿದೆ. ಇದಲ್ಲದೆ, ಸ್ಥಳ ದಲ್ಲಿಯೇ, (ಜಮೀನಿನಲ್ಲಿಯೇ) ಸಾವಯವ ಗೊಬ್ಬರ ಒದಗಿಸುವಂತಹ ಹಸಿರೆಲೆ ಗೊಬ್ಬರ ಬಳಕೆ ಮಾಡಲು ಹಸಿರೆಲೆ ಗೊಬ್ಬರ ಬೀಜಗಳನ್ನು ರಿಯಾಯಿತಿ ದರದಲ್ಲಿ ರೈತರಿಗೆ ಒದಗಿಸಲಾಗುತ್ತಿದೆ. ದ್ರವರೂಪದ ಸಾವಯವ ಗೊಬ್ಬರ ಉತ್ಪಾದನೆ ಮಾಡಲು ಬಯೋಡೈಜಿಸ್ಟರ್ ಸ್ಥಾಪನೆಗೆ ಸಹ ಸಹಾಯಧನ ನೀಡಲಾಗುತ್ತಿದೆ. ಹರಳು ರೂಪದ ಸಂಪತ್ಭರಿತ ಸಾವಯವ ಗೊಬ್ಬರ (ಕರ್ನಾಟಕ ಅಗ್ರಿ ಗೋಲ್ಡ್) ಒದಗಿಸಲು ಸಹ ಸಹಾಯಧನ ನೀಡಲಾಗುತ್ತಿದೆ.